ಪೂಜಾಳ ಮುಖವೇ ಕಂಡಂತಾಗಿ ಬೆಚ್ಚಿದ. ಇಪ್ಪತ್ತು ವರ್ಷಗಳ ಹಿಂದೆ ಹೀಗೇ ನಿಲ್ದಾಣದಲ್ಲಿ ‘‘ನಿನಗಾಗಿ ಎಲ್ಲವನ್ನೂ ತೊರೆದು ಬರುತ್ತೇನೆ’’ ಎಂದಿದ್ದ ಪೂಜಾಳಿಗಾಗಿ ನಡುರಾತ್ರಿಯಲ್ಲಿ ಕಾದುಕೂತಿದ್ದೆನಲ್ಲ. ಆ ದಿನ ಪೂಜಾ ಬಂದಿದ್ದರೆ ಬದುಕು ಯಾವ ನಿಲ್ದಾಣ ತಲುಪುತ್ತಿತ್ತೋ? ಪೂಜಾ ಬರಲಿಲ್ಲ. ಅಷ್ಟೆ ಅಲ್ಲ, ಮತ್ತೆಂದೂ ಸಿಗಲೂ ಇಲ್ಲ. ಸಿಕ್ಕಿದ್ದು ‘‘ಸುಳಿವು ಸಿಕ್ಕ ಮನೆಯವರು ಅವಳನ್ನು ತಡೆದರಂತೆ, ಊರಿಂದಲೇ ನಾಪತ್ತೆ ಮಾಡಿದರಂತೆ ಮದುವೆನೂ ಮಾಡಿಮುಗಿಸಿದರಂತೆ. ಎಲ್ಲ ಮರೆತು ಸುಖವಾಗಿರುವಳಂತೆ’’ ಎಂಬ ಅಂತೆಕಂತೆಗಳು ಮಾತ್ರ! ತಾನು ಮಾತ್ರ ಇನ್ನೂ ಯಾವುದೋ ನಿಲ್ದಾಣದಲ್ಲಿ ಬಾರದ ಯಾರಿಗಾಗಿಯೋ ಕಾದಿರುವೆನೆ? ತನ್ನ ಬದುಕು ಚಲಿಸದ ಪ್ರಯಾಣವಾಯಿತೆ? ಹೀಗೆ ಮನದ ಹಳಿ ಮೇಲೆ ಬ್ರೇಕ್ ಇಲ್ಲದೇ ಓಡುವ ವಿಚಾರಗಳಿಂದ ಸಣ್ಣ ಜೊಂಪು ಆವರಿಸಿದ್ದಾಗ...

ವೇಟಿಂಗ್ ಹಾಲಿನ ಬಾಗಿಲಲ್ಲಿ ಝುಗ್ಗನೆ ಬೆಳಕು ಮಿಂಚಿದಂತಾಗಿ ಅರೆಮುಚ್ಚಿದ ಕಣ್ಣುಗಳು ಒಮ್ಮೆಲೆ ತೆರೆದುಕೊಂಡವು. ಬಾಗಿಲಲ್ಲಿ ಅನಾರ್ಕಲಿ ಡ್ರೆಸ್ಸು ಧರಿಸಿದ ಬೆಳ್ಳಗಿನ ಹೆಣ್ಣೊಬ್ಬಳು ಪ್ರತ್ಯಕ್ಷವಾದಂತೆ ನಿಂತಿದ್ದಳು. ಬಿಸಿಲಿಗೆ ಬಂದದ್ದಕ್ಕೋ ಏನೋ ಅವಳ ಕೆನ್ನೆಗಳು ಹೆಚ್ಚೇ ಕೆಂಪಾಗಿದ್ದವು. ಅವಳ ನೇರ ಮತ್ತು ರೇಶಿಮೆಯಂತೆ ನುಣುಪುಗೊಳಿಸಿದ ಕೂದಲು ಮುಖಕ್ಕೆ ಹುಣ್ಣಿಮೆಚಂದ್ರನ ಹೊಳಪು ನೀಡಿದ್ದವು. ಧರಿಸಿದ ಕೂಲಿಂಗ್ ಗ್ಲಾಸಿನಿಂದಲೂ ಅವಳ ಕಣ್ಣುಗಳ ಮಿನುಗು ಕಾಣುತ್ತಿತ್ತು. ಶಾಂತ ಎದ್ದು ನಿಂತಾಗ ಅವಳು ‘‘ನಾನು ಕುಸುಮ’’ ಎನ್ನುತ್ತಾ ಒಳಬಂದು ಶಾಂತನ ಕೈಕುಲುಕಿದಳು.

ಶಾಂತಾರಾಮ ಚಂದದ ಮೆಸೇಜು ಬರೆಯಬಲ್ಲನೇ ಹೊರತು ಮಾತು ಸದರವೇ. ಆದರೂ ‘‘ಯು ಲುಕ್ ಗಾರ್ಜಿಯಸ್’’ ಅಂದ. ಮುಜುಗರ, ಕೀಳರಿಮೆ ದಾಟಲು ಅವನಿಗೆ ಇಂಗ್ಲೀಷು ನೆರವಾಗುತ್ತಿತ್ತು. ಕತೆ ಕಾವ್ಯದ ಕಾಲೇಜು ದಿನಗಳು, ಸೆಕೆ, ಶಿರಸಿಜಾತ್ರೆ, ಶರಾವತಿತೀರ, ಸಮುದ್ರ ... ಮಾತು ಮಾತು! ಅಕ್ಕಪಕ್ಕದಲ್ಲೇ ಕೂತದ್ದರಿಂದ ಆಗಾಗ ಟಚ್ ಆದಾಗ ಅವನ ಎದೆಯಲ್ಲಿ ಭಾವಗುಬ್ಬಿಗಳು ಚಿಲಿಪಿಲಿಗುಟ್ಟುತ್ತಿದ್ದವು. ಟ್ರೇನು ಸರಿಯಾದ ಸಮಯಕ್ಕೇ ಬಂತು! ಹತ್ತುವ

